ಮತ್ತು ಬೆಟರ್‌ಮೆಂಟ್ ಲೆವಿಯನ್ನು ತೆಗೆದುಕೊಳ್ಳಬೇಡಿ ಎಂಬುದಾಗಿ ಸರ್ಕಾರದಿಂದ ಒಂದು ಸುತ್ತೋಲೆಯನ್ನು ೮-೨-೭೯ ರಂದು ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಡಿ. ನಾರಾಯಣದಾಸ್—ಹಿಂದಿನ ೨೦-೨೫ ವರ್ಷಗಳಿಂದಲೂ ಅವರಿಗೆ ಹಾಕಿರತಕ್ಕಂತಹ ವಾಟರ್‌ರೇಟ್ ಮತ್ತು ಬೆಟರ್‌ಮೆಂಟ್ ಲೆವಿಯನ್ನು ಪೂರ್ತಾ ವಜಾ ಮಾಡುವುದಕ್ಕೆ ತಾವು ಏನಾದರೂ ಒಂದು ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್—ಗ್ರಿವೆನ್ಸ್ ಕಮಿಟಿಯವರ ಪೂರ್ತ ವರದಿ ಬರಲಿ. ಆಮೇಲೆ ನೋಡೋಣ.

Glucose producing unit at Shimoga

800 SRI KADIDAL DIVAKAR (Thirthahalli)—Will the Minister for Health and Family Welfare be pleased to state:—

(a) whether it has come to the notice of Government that the hardship is being caused to the poor patients who have to undergo Surgical Operations in the absence of glucose in many taluk Hospitals ;

(b) the action taken by Government in this behalf;

(c) whether a scheme to establish a glucose unit in Shimoga is under the consideration of Government;

(d) if so. when the unit will be established ?

SRI M. MALLAPPA (Minister for Health and Family Welfare)—

(a) Yes.

(b) Certain saline manufacturing units have been established at the district level in respect of glucose manufacturing and it is proposed to establish such units in certain other district centres. The glucose saline manufactured by these units are being supplied on indents received from the taluk level centres. Besides the district level authorities under their jurisdiction are empowered to purchase the medicines for use whenever it is necessary:

(c) Sanction has been accorded for the establishment of a glucose unit.

(d) The building works relating to the establishment of this glucose unit have not been completed. Permission is given to establish this unit temporarily in a portion of the premises of the hospital.

ಶ್ರೀ ಕಡಿದಾಳ್ ದಿವಾಕರ್.—ಕಡೆಗೂ ತೀರ್ಥಹಳ್ಳಿಗೆ ಆಗಬೇಕು ಎಂಬುದನ್ನು ಮನಗಂಡು ಮಂಜೂರಾತಿಯನ್ನು ಕೊಟ್ಟಿದ್ದೀರಿ. ಹಾಗೂ ಕಟ್ಟಡ ಇಲ್ಲದಿದ್ದರೂ ಸಧ್ಯಕ್ಕೆ ಇರುವ ಕಟ್ಟಡದಲ್ಲೇ ಸ್ಥಾಪನೆ ಮಾಡುತ್ತಿರುವುದು ಬಹಳ ಸಂತೋಷ. ಆದರೆ ಆ ಆಸ್ಪತ್ರೆಯಲ್ಲಿ ೬೦ ಬೆಡ್‌ಗಳು ಇವೆ. ಅಷ್ಟಕ್ಕೂ ಉಪಯೋಗವಾಗುವಂತೆ ಮಂಜೂರಾತಿಯನ್ನು ಕೊಟ್ಟಿದ್ದೀರೋ ಅಥವಾ ಅವರ ಬೇಡಿಕೆಗಿಂತ ಕಡಿಮೆ ಕೊಟ್ಟಿದ್ದೀರೋ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ?

† ಶ್ರೀ ಎಂ. ಮಲ್ಲಪ್ಪ.—ಆದರ ವಿವರಗಳು ನನ್ನಲ್ಲಿಲ್ಲ.

ಶ್ರೀ ಕಡಿದಾಳ್ ದಿವಾಕರ್.— ತಾವು ಮಂಜೂರಾತಿ ಕೊಟ್ಟಿರುವ ಗ್ಲುಕೋಸ್ ತಯಾರಿಕೆ ಘಟಕ ಉತ್ಪಾದನೆಯನ್ನು ಯಾವಾಗ ಪ್ರಾರಂಭ ಮಾಡುತ್ತದೆ ? ಅದರ ಉತ್ಪಾದನಾ ಸಾಮರ್ಥ್ಯ ಎಷ್ಟು? ಎಷ್ಟು ಹಣವನ್ನು ಈ ಘಟಕಕ್ಕಾಗಿ ವೆಚ್ಚ ಮಾಡಿದ್ದೀರಾ ?

ಶ್ರೀ ಎಂ. ಮಲ್ಲಪ್ಪ. - ೧೯೭೯-೮೦ನೇ ಸಾಲಿನಲ್ಲಿ ಕಟ್ಟಡಕ್ಕಾಗಿ ೩ ಲಕ್ಷ ೭೫ ಸಾವಿರ ರೂಪಾಯಿಗಳ ಅಂದಾಜನ್ನು ಈ ವರ್ಷದ ಆಯವ್ಯಯದಲ್ಲೇ ಸೇರಿಸಿದ್ದೇವೆ. ಈಗಾಗಲೇ ೭ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದನ್ನು ಬೇಗ ಮುಗಿಸಬೇಕೆಂಬುದು ಸರ್ಕಾರದ ಉದ್ದೇಶ ಈ ಗ್ಲುಕೋಸ್ ತಯಾರಿಕೆ ಘಟಕದಿಂದ ಶಿವಮೊಗ್ಗದಲ್ಲಿ ಬರತಕ್ಕಂತಹ ಟಿ.ಬಿ. ಕೇಂದ್ರಗಳಿಗೂ ಸರಬರಾಜು ಮಾಡಬೇಕು ಶಿವಮೊಗ್ಗ ಜಿಲ್ಲೆಯ ಅಗತ್ಯವನ್ನು ಪೂರೈಸಿ ಇನ್ನೂ ಹೆಚ್ಚಿಗೆ ಉತ್ಪಾದನೆಯಾದರೆ ಉಳಿದ ಜಿಲ್ಲೆಗಳಿಗೂ ಕೊಡುವುದಕ್ಕೆ ಪ್ರಯತ್ನ ಮಾಡೋಣ.

Implementation of Reservation Order

966 SRI B. H. LAKSHMANAIAH (Belur)—Will the Chief Minister be pleased to state—

(a) whether the Government has implemented the Government Order regarding reservation of 18 persent posts in promotional posts to the SC/ST Employees who are now working in several Depa tments of Government

(b) if so, the number of SC/ST Employees benefitted by this order in each department of the Government since the order was issued.

(c) whether it has come to the notice of the Government that some of the Departments have not implemented this order so far;

(d) if so, the names of Departments which have not implemented this order and reason for the same. ?

SRI D. DEVARAJ URS (Chief Minister)—

(a) Yes.

(b) Information is being collected and will be placed on the table of the house as soon as it is collected.

(c) No.

(d) Does not arise in view of reply to clause (c) above.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ನನ್ನ ಈ ಪ್ರಶ್ನೆಗೆ ತಾವು ಇಲ್ಲಿ ಎಂಬುದಾಗಿ ಉತ್ತರವನ್ನು ಹೇಳಿದ್ದೀರಿ. ತಾವು ಆದೇಶವನ್ನು ಹೊರಡಿಸಿ ಸುಮಾರು ಒಂದು ವರ್ಷವಾಗಿದೆ. ಈ ಒಂದು ವರ್ಷದಿಂದಲೂ ಎಷ್ಟು ಜನ ಪರಿಸರ-ಗಿರಿಜನರಿಗೆ ಮುಂಬಡ್ತಿಯನ್ನು ಕೊಟ್ಟಿದ್ದೀರಿ ? ಯಾವ ಇಲಾಖೆಯಲ್ಲಿ ಕೊಟ್ಟಿದ್ದಾರೆ ? ಯಾವ ಇಲಾಖೆಯಲ್ಲೂ ಕೊಟ್ಟಿಲ್ಲ. ಇದಕ್ಕೆನಾದರೂ ಯಾವುದಾದರೂ ಒಂದು ಸಮಿತಿಯನ್ನು ರಚನೆಮಾಡಿ ಇದರ ಬಗ್ಗೆ ಪೂರ್ಣ ವಿಚಾರಣೆ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ? ಅಥವಾ ಮಾಡುವುದಿಲ್ಲವೇ?